₹ 5/-

# ನೇಸರು

## ತಿಂಗಳೋಲೆ

PAGES 20

JANUARY 2024 | Nesaru Tingalole | Vol. XLII - 01



## ಮತ್ತೆ ಅಯೋಧ್ಯೆ ಮರಳಿ ಅರಳಿ ಬಂದಿದೆ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಶನ್‌ನಲ್ಲಿ ಹೊಸ ವರ್ಷದ ಸಂಭ್ರಮಾಚರಣೆ







ಮೈಸೂರು ಅಸೋಸಿಯೇಶನ್‌ನಲ್ಲಿ ಹೊಸ ವರ್ಷವನ್ನು ಬಹಳ ಸಂಭ್ರಮದಿಂದ ಆಚರಿಸಲಾಯಿತು. ಡಿಸೆಂಬರ್ 31 ರಂದು ಸದಸ್ಯರೆಲ್ಲರೂ ಬಹು ನಲುವಿನಿಂದ ಕೂಡಿ ಹೊಸ ವರ್ಷವನ್ನು ಅತ್ಯಂತ ಉತ್ಸಾಹದಿಂದ ಬರಮಾಡಿಕೊಂಡರು. ಈ ಪ್ರಯುಕ್ತ ಅಸೋಸಿಯೇಶನ್ ನ ಸದಸ್ಯರಿಗೆ ಗೇಮ್ಸ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಎಲ್ಲ ಕಾರ್ಯಕ್ರಮವನ್ನು ರೇಷ್ಮಾ ಶಂಕರಲಿಂಗ್ ಮತ್ತು ಅಶ್ವಿನ್ ವಸಿಷ್ಠ ಅವರು ತುಂಬಾ ಸುಂದರವಾಗಿ ನಡೆಸಿಕೊಟ್ಟರು. ಬಹಳ ಮುತುವರ್ಜಿಯಿಂದ ಎಲ್ಲ ಜವಾಬ್ದಾರಿಗಳನ್ನು ವಹಿಸಿಕೊಂಡು, ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣವಾಗುವಂತೆ ನೋಡಿಕೊಂಡರು. ಇವರಿಗೆ ಡಾ.ಗಣಪತಿ ಶಂಕರಲಿಂಗ್, ಶಶಿಕಾಂತ ಜೋಶಿ ಹಾಗೂ ಅಸೋಸಿಯೇಶನ್‌ನ ಸಿಬ್ಬಂದಿ ವರ್ಗ ಸಹಕರಿಸಿದರು

## ಮುಂಬರುವ ಕಾರ್ಯಕ್ರಮಗಳು

**ಭಾನುವಾರ ಜನವರಿ 14,2023 ರಸಂಜೆ 6.00ಕ್ಕೆ** – ಕುಮಾರಿ ಧನ್ಯಾರಿಂದ
ಕರ್ನಾಟಕ ಸಂಗೀತ ಹಾಡುಗಾರಿಕೆ

**ಶನಿವಾರ ಜನವರಿ 27, 2023 ರಸಂಜೆ 6.00ಕ್ಕೆ** – ನಾಡ ಹಬ್ಬ ಕಾರ್ಯಕ್ರಮ

ನೇಸರು ತಿಂಗಳೋಲೆ

ಸಂಪುಟ - 42 ಜನವರಿ- 2024 ಸಂಚಿಕೆ-1

# ಮರೀಚಿಕೆಯಾಗುತ್ತಿರುವ ಮಾನವೀಯತೆ



**ಡಾ. ಜ್ಯೋತಿ ಸತೀಶ್**

"ಏನಾದರೂ ಆಗು, ಮೊದಲು ಮಾನವನಾಗು.."

ಎಂದು ಕುವೆಂಪುರವರು ಹಾಡಿ ಕೊಂಡಾಡಿದ ನಾಡಿದು. ಬದುಕು ಎಂಬುದು ನಮಗೆಲ್ಲರಿಗೂ ದೊರೆತ ಬೆಲೆ ಕಟ್ಟಲಾಗದ ಒಂದು ಅಮೂಲ್ಯ ಕಾಣಿಕೆ ಎಂದೇ ಹೇಳಬಹುದು. ತಾಳ್ಮೆ, ಪರೋಪಕಾರ, ಸಹಬಾಳ್ವೆ, ದಯೆ, ಕರುಣೆ ಹೀಗೆ ಮುಂತಾದ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ರೂಢಿಸಿಕೊಳ್ಳುವುದರ ಮೂಲಕ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು. ಇಂದು ಮನುಷ್ಯ ಮನುಷ್ಯರ ನಡುವೆ ಸೇತುವೆಯಾಗಬೇಕಿದ್ದ ಧರ್ಮ ಅವರ ನಡುವಿನ ಬಹುದೊಡ್ಡ ತಡೆಗೋಡೆಯಾಗಿ ನಿಂತಿರುವುದು ವಿಪರ್ಯಾಸವೇ ಸರಿ. ಯಾವುದೇ ಧರ್ಮವು ಹಿಂಸೆ, ಅಸೂಯೆ, ಜಗಳ ಮುಂತಾದ ಋಣಾತ್ಮಕ ಅಂಶಗಳನ್ನು ಪ್ರತಿಪಾದಿಸುತ್ತಿಲ್ಲ. ನಮಗೆ ಇಂದು ಬೇಕಾಗಿರೋದು ಮನುಷ್ಯ ಧರ್ಮ. ಮನುಷ್ಯ–ಮನುಷ್ಯರ ನಡುವಿನ ಸಾಮಾಜಿಕ ಸಂಬಂಧಗಳಲ್ಲಿ ಬಿರುಕು ಮೂಡಿಸುವ ಈ ಧರ್ಮಗಳಿಗಿಂತ ಮಾನವೀಯತೆಯನ್ನೇ ತಳಹದಿಯನ್ನಾಗಿ ಪಡೆದಿರುವ ಮನುಷ್ಯ ಧರ್ಮವೇ ಶ್ರೇಷ್ಠವಾದುದು.

ಮನುಷ್ಯರಲ್ಲಿ ಮಾನವೀಯತೆ ಬಹಳ ಮುಖ್ಯವಾಗಿ ಬೇಕು. ಎಲ್ಲ ಜೀವರಾಶಿಗಳಲ್ಲಿ ಮನುಷ್ಯರಿಗೆ ಮಾತ್ರ ತಪ್ಪು ಸರಿ ಅರ್ಥಮಾಡಿಕೊಳ್ಳುವ ವಿವೇಚನಾ ಶಕ್ತಿ ಇದೆ. ಮಾನವರಾಗಿರುವ ನಾವು ಮಾನವೀಯತೆ ರೂಢಿಸಿಕೊಳ್ಳಬೇಕಾಗಿದೆ. ಆಧುನಿಕತೆಯತ್ತ ನಾವೆಲ್ಲರೂ ದಾಪುಗಾಲಿಡುತ್ತಿದ್ದೇವೆ. ನಮ್ಮ ದೇಶ ತಂತ್ರಜ್ಞಾನದಲ್ಲಿ ಇಷ್ಟು ಪ್ರಗತಿ ಸಾಧಿಸಿದ್ದೇವೆ ಎಂಬುದನ್ನು ಅಂಕೆ ಸಂಖ್ಯೆಗಳ ದಾಖಲೆಗಳ ಮೂಲಕ ನೀಡುತ್ತಿದ್ದೇವೆ. ಆದರೆ ಮಾಯವೀಯತೆಯ ನಿಟ್ಟಿನಲ್ಲಿ ನಾವು ಎಷ್ಟೋಂದು ಹಿಂದೆ ಸರಿಯುವುತ್ತಿದ್ದೇವೆ ಎನ್ನುವುದರ ಪರಿವೇ ಇಲ್ಲ ಯಾರಿಗೂ. ಎಲ್ಲೆಂದರಲ್ಲಿ ಕೊಲೆ, ಅತ್ಯಾಚಾರ, ದರೋಡೆ ನಡೆಯುತ್ತಿದೆ. ನಾಳೆ ಅರಳಬೇಕಾಗಿದ್ದ ಹೂವನ್ನು ಇವತ್ತೇ ತಮ್ಮ ಹುಚ್ಚು ಬಯಕೆಯ ಈಡೇರಿಕೆಗಾಗಿ ಹೊಸಕಿ ಹಾಕುತ್ತಿದ್ದೇವೆ. ಇದ್ಯಾವ ನ್ಯಾಯ. ತಮ್ಮ ಮನೆಯ ಮಕ್ಕಳು ಸುರಕ್ಷಿತರಾಗಿರಬೇಕು. ಇನ್ನೊಬ್ಬರ ಮನೆಯ ಹೆಣ್ಣುಮಕ್ಕಳು ಏನಾದರೇನು ಎನ್ನುವ ಅಸಡ್ಡೆ ಎಲ್ಲ ಕಡೆ ತಾಂಡವಾಡುತ್ತಿದೆ. ಇದೇನಾ ಮಾನವೀಯತೆ? ಇನ್ನೊಬ್ಬರ ನೋವುನ್ನು ಬರಿ ಟಿವಿ ಪೇಪರ್‌ನಲ್ಲಿ ನೋಡಿದಾಕ್ಷಣ ಅಯ್ಯೋ ಎಂದಾಕ್ಷಣ ನಮ್ಮ ಕೆಲಸ ಮುಗಿಯಲಿಲ್ಲ. ನಾಳೆ ಅದೇ ನೋವು ನಮ್ಮ ಪಾಲಿಗೆ ಬಂದಾಗ ಆ ನೋವಿನ ನಿಜಾರ್ಥ ನಮಗೆ ಅರಿವಿಗೆ ಬರುತ್ತದೆ. ಇದೆಲ್ಲ ಈಗ ಸರ್ವೇ ಸಾಮಾನ್ಯ ಎಂದು ಕೈಕಟ್ಟಿ ಕುಳಿತರೆ ನಡೆಯುವುದಿಲ್ಲ. ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕಾಗಿದೆ. ಆ ಕಲ್ಲು ಮನಸ್ಸುಗಳು ಎನ್ನುವುದಕ್ಕಿಂತ, ವಿಕೃತ ಹೃದಯಗಳ ಮನೋಸ್ಥಿತಿ ಬದಲಾಗಬೇಕಿದೆ. ಮಾನವೀಯತೆಯ ನೆಲಗಟ್ಟು ನಿಜಾರ್ಥದಲ್ಲಿ ಅವರ ಮನಸ್ಸಿನಲ್ಲಿ ನೆಲೆಯೂರಬೇಕಾಗಿದೆ.

ಎಲ್ಲ ಧರ್ಮದ ಸಾರವೇ ಮಾನವೀಯತೆ. ಅದನ್ನು ಬಿಟ್ಟು ಮತ್ತೆಲ್ಲವನ್ನು ನಾವು ಪಾಲಿಸಿಕೊಂಡು ಬರುತ್ತಿದ್ದೇವೆ. ಶ್ರಮಿಕರಿಗೆ ಬೆಲೆ ಇರಲಿ, ಬಡವರ ಬಗ್ಗೆ ಕಾಳಜಿ ಇರಲಿ.. ದುಡ್ಡು ಮಾಡೋದು ಒಂದೇ ಜೀವನವಲ್ಲ. ದುಡ್ಡಿಗಿಂತಲೂ ದೊಡ್ಡದಾದದ್ದು ಮಾನವೀಯತೆ. ಸಹಾಯ ಮಾಡದ ಮನುಷ್ಯ ಬದುಕಿದ್ರೂ ಸತ್ತಂತೆ, ವ್ಯರ್ಥ ಜೀವನ ಸಾಗಿಸೋ ಬದಲು ಬದುಕಿರುವಾಗ ನಾಲ್ಕು ಜನರಿಗೆ ಸಹಾಯ ಮಾಡಿದ್ರೆ ನಾವು ಸತ್ತಿದ್ದರೂ ಬದುಕಿದ್ದಂತೆ.

ಇವತ್ತಿನ ಮಕ್ಕಳಿಗೆ ಬೇಕಾಗಿರೋದು ಲ್ಯಾಪ್‌ಟಾಪ್ ಅಲ್ಲ. ಮಕ್ಕಳಿಗೆ ಬೇಕಾಗಿರೋದು ಜೀವನ ಮೌಲ್ಯದ ಪಾಠ. ಒಂದು ದಿನ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಭೂಪಟದ ಚಿತ್ರವನ್ನು ನೀಡಿ ಇದರಲ್ಲಿ ಹಿಂದೂಸ್ಥಾನದ ಭಾಗವನ್ನು ಚಿತ್ರಿಸಿ ಅಂದರಂತೆ, ಒಂದು ಹುಡುಗನನ್ನು ಬಿಟ್ಟು ಮತ್ತೆ ಎಲ್ಲ ಮಕ್ಕಳು ಹಿಂದೂಸ್ಥಾನದ ಭೂಪಟವನ್ನು ಚಿತ್ರಿಸುವುದರಲ್ಲಿ ವಿಫಲರಾದರಂತೆ. ಒಬ್ಬನೇ ಒಬ್ಬ ಹುಡುಗ ಹಿಂದೂಸ್ಥಾನದ ಚಿತ್ರವನ್ನು ಚಿತ್ರಿಸಿ ಶಿಕ್ಷಕರಿಗೆ ತಂದು ತೋರಿಸಿದನಂತೆ. ಆಗ ಶಿಕ್ಷಕರು ಇದು ನಿನ್ನಿಂದ ಹೇಗೆ ಸಾಧ್ಯವಾಯಿತು ಎಂದು ಕೇಳಿದರಂತೆ ಆ ಹುಡುಗನಲ್ಲಿ. ಆಗ ಆ ಹುಡುಗ ಅಂದನಂತೆ ಏನಿಲ್ಲ ಟೀಚರ್ ಭೂಪಟದ ಹಿಂದೆ ಒಂದು ಮನುಷ್ಯನ ಆಕಾರವಿದೆ. ನಾನು ಆ ಮನುಷ್ಯನನ್ನು ಜೋಡಿಸುತ್ತ ಹೋದಂತೆ ಹಿಂದೂಸ್ಥಾನದ ಭೂಪಟ ಸಿದ್ಧವಾಯಿತು ಅಂದನಂತೆ.

ನಮ್ಮ ನೆರೆಯವರನ್ನು ನಮ್ಮವರಂತೆಯೇ ಪ್ರೀತಿಸಬೇಕು. ಪ್ರತಿಯೊಬ್ಬರ ನೋವಿನಲ್ಲೂ ನಾವು ಭಾಗಿಗಳಾಗಬೇಕು. ಇವತ್ತು ನಾವು ನೀಡಿದ ಸಹಾಯಹಸ್ತ ನಾಳೆ ನಮಗೆ ಅಭಯಹಸ್ತವಾಗುತ್ತದೆ. ಅಮೇರಿಕಾದ ಅಧ್ಯಕ್ಷ ರೋನಾಲ್ಡ್ ರೇಗಾನ್ ಅವರ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ. "We can't help everyone, but everyone can help someone". ಎಷ್ಟೊಂದು ಅರ್ಥಪೂರ್ಣವಾದುದು ಈ ಮಾತು. ಕುವೆಂಪುರವರ ವಿಶ್ವಮಾನವ ಸಂದೇಶ ನಮ್ಮೆಲ್ಲರ ಬಾಳಿನ ಗುರಿಯಾಗಬೇಕು.

ಎಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಹೊಸ ವರ್ಷ ಎಲ್ಲರ ಬಾಳಲ್ಲೂ ಹೊಸ ಹರುಷ, ಉಲ್ಲಾಸವನ್ನು ತರಲಿ ಎಂದು ಮನಸಾ ಹಾರೈಸುವೆ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎಸ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
24037065
Email:
mysoreassociation.mumbai@gmail.com
Website:
www.mysoreassociation.in

# ಹಿಂದು - ಇಂದು - ಮುಂದು



ಡಾ. ಮಂಜುನಾಥ್

ನಮ್ಮ ಇಂದಿನ "ಹಿಂದೂ ಧರ್ಮ" ಬೇಕಾದ ಹಾಗೆ ಕಾಲ ಕಾಲಕ್ಕೆ ಅನುಗುಣವಾಗಿ ಮತ್ತೆ ಮತ್ತೆ ಮೂಡಿ ಬಂದಿದೆ. ಆದರೆ ಎಲ್ಲದಕ್ಕೂ ತಳಹದಿಯಾದದ್ದು "ಪುನರ್ಜನ್ಮ". ಆ ಜಗತ್ ಶಕ್ತಿ, ಪರಾಬ್ರಹ್ಮ, ಬಗೆ ಬಗೆಯಾಗಿ ನಮಗೆ ಕಾಣಿಸಿದರೂ ಕೂಡ ಆ ಎಲ್ಲಾ ರೂಪಗಳನ್ನೂ ನಾವು "ಪುನರ್ಜನ್ಮ"ವಾಗಿ ಕಾಣುತ್ತೇವೆ. ನಮ್ಮ ಇಂದ್ರಿಯಗಳು ಕಂಡಿದ್ದೇ ದೇವರೆಂದು ನಾವು ತಿಳಿಯುವುದಿಲ್ಲ.

ಮಿಂಚು-ಸಿಡಿಲು, ಬೆಂಕಿ, ಗಾಳಿ, ಭೂಮಿ, ಆಕಾಶಗಳೇ ನಮ್ಮ ದೇವರುಗಳಾಗಿದ್ದ "ಹಿಂದಿನಿಂದ" ಇಂದು ನಾವು ಅವುಗಳನ್ನು ಕೇವಲ ರೂಪಗಳಾಗಿ ಪರಿಗಣಿಸಿ ಮುಂದುವರೆದಿದ್ದೇವೆ. ಆದರೆ ನಮ್ಮ ಗುರಿ ಒಂದೇ ಆಗಿದೆ. "ಸತ್ಯ"ವನ್ನು ಹುಡುಕುವುದು.

ನಮ್ಮಲ್ಲಿ ಇತಿಹಾಸ ಚರಿತ್ರೆಗೆ ಅಷ್ಟು ಬೆಲೆ ಇಲ್ಲ. "ರಾಮ" ಎನ್ನುವ ವ್ಯಕ್ತಿ ಇದ್ದನೇ-ಇಲ್ಲವೇ ಎನ್ನುವುದು ನಮಗೆ ಬೇಡ. ಆ ಬಗೆಯ ಓರ್ವ ಮನುಷ್ಯ ಹಿಂದೂ ಬೇಕಿತ್ತು. ಇಂದೂ ಬೇಕು....ಮುಂದೂ ಬೇಕು. ಈ ನಮ್ಮೆಲ್ಲರ ಗುರಿ, ಮತ್ತೆ ಮತ್ತೆ ರಾಮನನ್ನು ನಮ್ಮಲ್ಲಿ ಮೂಡಿಸುತ್ತದೆ. ಆದುದರಿಂದಲೇ ರಾಮ ಈಗ ಮತ್ತೆ ಅಯೋಧ್ಯೆಗೆ ಮರಳಿದ್ದಾನೆ. ಲಂಕಾ ಕುಸಿದಿದೆ. ಈ 'ರಾಮಾಯಣ' ನಮ್ಮೆಲ್ಲರಲ್ಲೂ ಬೇರೂರಿದೆ ಎನ್ನುವುದಕ್ಕೆ ಕಾರಣ, ಓರ್ವ ಕಾಡು ಮನುಷ್ಯ ಬೇಡರವನು ಈ ಕಾವ್ಯವನ್ನು ಬರೆದಿದ್ದಲ್ಲದೆ, ಅದನ್ನು ಹಳ್ಳಿ ಹಳ್ಳಿಗಳಲ್ಲೂ ದಿನಾ ಸಂಜೆ ಕಥೆಯಾಗಿ ಹರಡಿದ. ಎಲ್ಲಾ ದಾಸರ ಶ್ರಮ ಎನ್ನುವುದು.

ಒಂದು ಸಮುದಾಯದ ನೆನಪು, ಎಂದಿಗೂ ಮರೆಯಾಗುವುದಿಲ್ಲ. ಆ ಸಮುದಾಯಕ್ಕೆ ರಾವಣ ಬೇಡವಾಗಿದ್ದ, ರಾಮ ಬೇಕಾಗಿದ್ದ. ಇಂದು ಅವನಿಗೆ ಒಂದು ಮಂದಿರವನ್ನು ಕಟ್ಟುವುದಕ್ಕಾಗಿ ಎಲ್ಲಾ ಹಳ್ಳಿಗಳಿಂದಲೂ ಒಂದು ಇಟ್ಟಿಗೆ ಬಂದಿದೆ ಎಂದರೆ ಆ ಸಮುದಾಯದ ನಂಬಿಕೆ ಎಷ್ಟು ಗಟ್ಟಿಯಾಗಿದೆ ಎಂದು ನಮಗೆ ತಿಳಿಯುತ್ತದೆ.


ನಿನ್ನೆ ತಾನೇ ಹನುಮಾನ್ ಜಯಂತಿ ಜರುಗಿದೆ. ಈ ಹನುಮಂತ ನಮ್ಮ ಮೊದಲ ಕನ್ನಡಿಗ. ಆತನ ಬುದ್ಧಿ, ನಡೆವಳಿಕೆ, ನಿಷ್ಠೆ ನಮ್ಮ ನಾಡಿನ ಮಾದರಿಯಾಗಿದೆ. ಅಂತೆಯೇ ಯಾರೇ ಬಾದಷಹಾ, ಕಲ್ಲು ಇಟ್ಟಿಗೆಗಳನ್ನು ಪುಡಿ ಪುಡಿಯಾಗಿಸಿದರೂ ಕೂಡ ಅಲ್ಲಿಯೇ ಶಿವನನ್ನೇ ಕಾಣುತ್ತಾ ಅವನು ಹಿಂದಿರುಗುವುದನ್ನೇ ಕಾಯುತ್ತಿರುವ 'ನಂದಿ' ನಮ್ಮ ಸಮುದಾಯದ ಮಾದರಿಯಾಗಿದೆ. ಕಲ್ಲು ಪುಡಿಯಾಗಬಹುದು, ಆದರೆ ನಮ್ಮ ಮನಸ್ಸು ಕಲ್ಲಾಗಿರುವುದರಿಂದಲೇ ಆ ಕಾಶಿಯ ಶಿವ ನಮ್ಮ ಗುರಿಯಾಗಿದ್ದಾನೆ. ಅವನು ನಮ್ಮ ಮೂರನೆಯ ಕಣ್ಣನ್ನು ತೆರೆಸಬೇಕು ಎನ್ನುವುದೊಂದೇ ನಮ್ಮ ಬಯಕೆ.

ನಾವು ನಡೆದು ಬಂದ ದಾರಿಯಲ್ಲಿ ನಾವು ತುಳಿದ ಕೆಸರು ನಮ್ಮ ಕಾಲಿಗೆ ಅಂಟಿರುವುದು ದಿಟ. ಆದರೆ ಈಗ ನಾವು ಕಾಲು ತೊಳೆದು ಕೆಸರನ್ನು ತೊರೆದು, ಮತ್ತೆ ನಡೆಯಬೇಕಾಗಿದೆ.

ಕಾಲು ತೊಳೆಯುವುದು ಸುಲಭ. ಆದರೆ ನಮ್ಮ ತಲೆಗಳನ್ನು ಮಾಸಿದ್ದನ್ನು ಮತ್ತೆ ತೊಳೆಯುವುದು ಒಂದು ತೊಂದರೆಯಾದ ಕೆಲಸ. ಆದರೆ ಆಗುವುದೇ ಇಲ್ಲ ಎನ್ನುವುದು ಸುಳ್ಳು. ಇಂದು ಅಹಿಂದರಾಗಿ ಕೇವಲ ಪುಗಸಟ್ಟೆ ಬಸ್ ಪ್ರಯಾಣ, ವಿದ್ಯುತ್ ಶಕ್ತಿಗಳನ್ನೇ ಬಯಸದೆ, ನಮ್ಮೆಲ್ಲರ ಗುರಿಯತ್ತ ಶಕ್ತಿಯುತವಾಗಿ ಪಯಣಿಸುವುದು ಈಗ ಬೇಕಾಗಿದೆ.

ಈ ಪಯಣದಲ್ಲಿ ರಾಮಮಂದಿರ, ಗ್ಯಾನವ್ಯಾಪಿ ಮಥುರಾ ಎಲ್ಲವೂ ಇಂದು ನಮಗೆ ದೊರಕುತ್ತಿದೆ. ಅಲ್ಲಿಗೇ ಸಂತೃಪ್ತರಾಗದೆ ನಮ್ಮ ನಾಡಿನ ಸಂಸ್ಕೃತಿಯನ್ನು ಮತ್ತೆ ಪುನರ್ಜೀವ ಗೊಳಿಸಿ, ನಮ್ಮ ಎಳೆಯರ ಮನಸ್ಸನ್ನು ಹೊರಗಿನ ದೇಶಗಳಿಂದ ಇತ್ತೆಡೆಗೆ ಎಳೆಯುವುದೇ ಈ ಪಯಣದ ಗುರಿಯಾಗಬೇಕು. ಅದೇ ನಮ್ಮ "ಮನಮಂದಿರ".

# Few more strides before the centenary



✍ **M.A.N. Prasad**

While renovating the building of Association, we made sure that the aesthetics of the place is given due importance. The stair well and the lift entrances were clad with marble, the main door to the building had specially carved emblems of ancient kingdoms of Karnataka. The lighting in the building was modern and elegant. A rock garden was created at the entrance to the foyer on ground floor. This was designed by our Vice President Smt. Leela Rajkumar. She not only designed it but also personally supervised it while it was being done. The rest rooms were modern and user friendly. The cafeteria on the terrace was well finished and attractive outdoor tables and chairs were provided. Thus, the association wore a modern and elegant look.

**PLATINUM JUBILEE CELEBRATIONS:**

The Platinum Jubilee was celebrated through yearlong variety of programmes.

To begin with, a two-day programme entitled" Bhakthi Sangam" was held in which Dr. Vasanth Kushtagi gave a lecture on Contribution of Haridasas of Karnataka to the Bhakthi Movement. This was followed by 'Haridasanjali" by Vidushi Dr. Sukanya Prabhakar with and Vidwan Mysore Subramanya. On the second day of the programme, Dr. Ashok Ranade gave a lecture on the contributions of the saints of Maharashtra to the bhakthi movement and this was followed by a concert of Pandit Raghunandan panshikar.

A puppetry shows of Yakshgana by Ganesh Yakshgana Gombeyata Mandali, the famous troupe of Kogga Kamath from Kundapur, was organised. This troupe, which has a tradition of over 300 years in puppet yakshagana, presented Lankadahana on the occasion. They were in Mumbai to participate in the International Puppetry Festival, which was being held here.

A festival of Award-winning Kannada films "Kanooru Heggadathi" and Matadana" was organized in joint co-operation with sister Kannada Organisations. Producer of the two films, the lead actors and Director of the films graced the screening of the films at various locations and interacted with the audience. A press conference was held, which elicited good response.

A major event of the platinum jubilee was Karnatakotsava - spread over 11 days. The festival which was in fact many festivals in one festival was a resounding success and was well attended by a large gathering. It was organized with the collaboration of The Dept. of Information, Dept. of Kannada & Culture of the Govt. of Karnataka, along with the Karnataka State Tourism Development Corporation, Karnataka the Lalitha Shilpa Kala Academy, Karnataka Kala Academy, and Mysore Sales International. It was sponsored by Dena bank, ICICI Bank, Dept. of Kannada & Culture, Govt. of Karnataka, KSTDC, Karnataka Nataka Academy, Bharata Yatra Kendra Bangalore, Udyan, and IPTA.

The festival included:

- An exhibition of the works of eminent sculptors and painters of Karnataka.
- A multilingual Theatre Festival of 8 plays - 5 from Karnataka, 2 from Maharashtra and 1 from New Delhi.



- A seminar on Indian Theatre. A programme of Sugama Sangeeta.
- Pratibimba a programme of Kavi Goshti & Kavya Gayana.
- Mandara, an exhibition of Karnataka's silk & handicrafts, and A food festival catering the culinary specialties of Karnataka.

The KSTDC was kind enough to send a team of its specialists to man these operations. Different and rare items offered each day at the festival was a major attraction for the discerning gourmet of Mumbai.



To mark the Platinum Jubilee, Association wanted to set up a Composite Training Centre of Performing Arts. To fund this ambitious project a concert of Pandit Hariprasad Chourasia was organized at Nehru centre. Apart from sale of tickets, sponsorships, souvenir advertisements, display of banners etc. were employed. Minister from Karnataka Shri R.V.Deshpande inaugurated the function and released the souvenir. We were successful in raising sufficient funds through sale of tickets, sponsorships and souvenir advertisements.

To mark the Platinum Jubilee year, special logo and stationery was designed and used. A special memento was designed to be given to various guests who participated I our Platinum Jubilee celebrations.

Our senior member Shri.V.K.Murthy, who received the Best Cameramen award from MAMI and Kodak’s Technician Par Excellence award, was felicitated on the occasion of the Platinum Jubilee for the contribution he has made to the Association, particularly to its theatre activity.

# Differences between Hinduism and Abrahamic Religions

-by Mandan Mishra

Hinduism does not believe in converting others to your own Opinions and concepts. Each is in search of Truth, and he will absorb the Truth in his own manner. The only Fundamental aspect being, DO YOUR DUTY.

How do the Middle Eastern religions actually function? This can be best answered by raising many other questions.

- Why does Christianity produce so many bigots and pompous jerks?
- Why does Islam produce so many terrorists?
- Why do Muslims have no respect for women and why do Islamic nations have such poor and abysmal human rights?
- Why are Roman Catholic states like Italy, Ireland, Portugal, Greece etc poorer than Protestant countries like the UK, Germany and US?
- Why do Hindus produce so many philosophers and saints?
- How has Hinduism survived for 5000 years?
- Or to summarize, why does Hinduism rock, whereas Christianity and Islam suck?

In this article, I will try to address all these points by highlighting the differences between Hinduism and Abrahamic Religions.

**Hinduism:** Hinduism is the religion of majority people in India. Buddhism, Jainism, Sikhism etc are all derivatives of Hinduism, each having followed their own growth trajectory. At one time, Afghanistan, Pakistan, Bangladesh and south-east Asia were completely Hindu-Buddhist in nature. With the advent of converting Christians and murdering Muslims, today only 80% of India alone is Hindu and 60% of south-east Asian countries are Buddhist.

Hinduism is the oldest true religion of the world.

Abrahamic Religions: Abrahamic Religions are those which originated in the deserts of middle-east from Abraham - Judaism, Christianity and Islam, the last two of which have been the most destructive religions in the history of mankind.

Judaism, Christianity and Islam are backward and primitive religions and products of middle-eastern geography. The Deserts produce people without Kindness.

**Definition of God**

In Abrahamic faiths, Judaism, Christianity and Islam, God

1. is personal, male, separate from his creation and with strong likes and dislikes.
2. greatly dislikes any human being who does not acknowledge him as the only true God.
3. In fact, he even has decreed that any such human being will burn eternally in hell, unless he officially (through a small ritual) joins the 'true religion'.

As is obvious, this is a stupid definition of God and a product of ignorance which is common in Muslims and Christians, and this is the source of all Terrorism in the world today. We cannot have a dictator God in this modern day and age.

In Hinduism, there are many shades of God:

1. gods - deities/ representation of forces/ ideas, which serve a specific purpose
2. God - somewhat monotheistic/ personal God
3. Brahman or Tat (That) - Supreme All-Pervading Truth/ The Core Essence of Existence

Thus, in Hinduism, " one invisible, conscious essence is the only true 'thing' permeating everything in this apparent universe and beyond. They called it Brahman (from big, expanding) or simply Tat (that) and postulated that it was eternal, infinite, unchanging, true, aware, blissful and the invisible basis of everything including our own person. So basically, we are that Brahman. Our essence is That. Only, we are born blind to this truth and the purpose of life is to realize it."

**Brahman or Tat - All Pervading Reality in Hinduism:**

As per Pushti-Marg (2), "Hindus believe in an absolutely omnipresent, omnipotent God that is neither jealous nor feels threatened by "other gods' '. All aspects of divinity are aspects of the self-same GOD and hence no jealousy or competition! There is no Satan waiting to bait God - if there was, wouldn't that "Satan '' be challenging the omnipotentness of GOD? We believe the universe to be a "play" of the divine and hence all the good and bad we see are characters in the divine play. "

**Prophet:**

Christians and Muslims have their Prophets - Jesus and Mohammed - who apparently had "direct contact" with their Gods and through them downloaded God's message. The word of the Prophet is considered to be core tenets of the religion.

1. Nobody can question or critically analyze the Prophets message. You can and will be put to death.
2. Nobody can say, I don't give tuppence. You can and will be put to death.
3. Nobody can draw a cartoon. You can and will be put to death.
4. Nobody can ask for proof. You can and will be put to death.

In other words, in Abrahamic Religions, and especially in Islam, you have NO choice. You HAVE to believe the Messenger's message and you HAVE to accept that religion - else you can and will be put to death.

In Hindus there are and there have been no Prophets.

From time immemorial Rishis and Munis, learned people, each independently or in groups explored and discovered different truths. These Truths were presented to the public and ONLY after critique and proper experimental verification, did somebody's message gain acceptance. Hinduism is like a huge repository of Truth, where the Collective Spirituality of Hindus are stored, and preserved and built-upon bit by bit.

The problems with a Prophet based religion are manifold:

1. What if some Prophet is a paedophile?
2. What if a Prophet is a crazed genocidal maniac who justifies his killings through made-up God messages?
3. What if a Prophet is a moron?
4. What if a Prophet is a sex-addict who makes up God-messages to justify his sexual depravity?
5. What if a Prophet is homosexual and says that having normal sex is against God's will?

A Prophet based region, like the desert Abrahamic faiths have all these issues.

Human Intelligence and Science versus Religion.

Abrahamic Religions like Christianity and Islam have no regard for human intelligence.

Their Holy Books like Bible and Koran make some outrageous claims, which apparently, we must accept or else they will kill us.

As Maria Wirth says, "The Abrahamic religions come as a fixed 'belief system', which means that blind belief is required in dogmas, which have no chance to be verified."

Thus, In Christianity and Islam, there is a marked difference between religion and Science. Because of the dogmatic ways in which their regions are structured, you have to be either a strong-believer (like Bible thumpers of Texas or Arab extremists) or you have to reject those religions outright like many Western scientists do. If you do reject, then you are dubbed an Atheist and you will most likely be persecuted or killed, especially in Islam.

Hinduism is an experiential religion. A Hindu DOES NOT have to accept anything unless he is fully satisfied after having EXPERIMENTALLY verifying its core tenets. In fact, it is perfectly okay to be a non-believer and sceptic within the Hindu fold. They are not killed; they are in fact respected and listened to attentively.

Again, quoting Maria Wirth (1), "*Many in the west feel oppressed by mandatory belief in dogmas, and leave the Church. They opt for atheism as for them anything metaphysical is intrinsically connected with the Church. Some, mostly educated people, discover Buddhism. Hinduism unfortunately is not an option for most, as it is projected to be weird. Only few discover its value and stand by it, like Julia Roberts did.*"

There is no such dichotomy in Hinduism. Some of the greatest Indian Hindu scientists are devout Hindus, and there is nothing remotely odd about that.

In Hinduism, Questioning is the basis of pursuing knowledge/Truth. Science has always been the foundation on which various Rishis went on a search. In Rigveda, they conceived that this World is controlled by Elemental forces. But In Upanishats they realised these elemental forces are only manifestations of the Universal Energy, and they named it as PARAA BRAHMA. Brhama means HUGE or LIMITLESS, and PARAA means PARAMA (above all).

# ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನಿತ ಚಿತ್ರಗಳು



Bhavya Gunwant Jain - Group - A : 1st Prize



Yashika Vaity - Group - A : 2nd Prize



Veda Satyawan Satelkar - Group - A : 3rd Prize




Vency Nilesh Mehta - Group - A : Spl. Recommandation




Sai Chandan Bhagat - Group - B :1st Prize




Taareni Bhowmik - Group - B : 2nd Prize

# ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನಿತ ಚಿತ್ರಗಳು



Prisha Negi - Group - B : 3rd Prize



Yaasika Selvi Vigneshwaran -Group - B : Spl. Recommandation



Girija Vidyadhar Parulekar - Group - C : 1st Prize




Hasti Hiten Doshi - Group - C : 2nd Prize



Sanya Sachin Kamble - Group - C : 3rd Prize



Pranava Pritesh Randeria-Group- C - Spl Recommandation




Ambiya Shaikh- Group - D : 1st Prize



Dnyaneshwari Pandurang Magdum -Group : D -2nd Prize

# ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನಿತ ಚಿತ್ರಗಳು



Ananya Vasal - Group - D : 3rd Prize



Riya Shivla Prajapati - Group - D : Spl Recommandation



Prajwal Pravin Gawad - Group - E : 1st Prize



Shravani Satyawan Satelkar - Group - E : 2nd Prize




Umaymah Maqbool Ahmed Thakur - Group - E : 3rd Prize



Kratika Mourya - Group- E : Spl. Recommandation

# ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನಿತ ಚಿತ್ರಗಳು




Vaibhav Jagtap - Landscape : 1st Prize




Vishal Sutar - Landscape - 2nd Prize




Vinayak Kheratkar - Landscape : 3rd Prize




Kevin Dias - Landscape - Consolation - 2




Poorvashri Hiremath Landscape - Woman Special Prize



Suraj Karande Landscpae - Consolation -1



Sachin Bamne Landscape Judge's Spl Recommandation -



Omkar Ubare Landscape Judge's Spl Recommandation

ಕಳೆದ ಸಂಚಿಕೆಯಿಂದ…

# ಪಯಣಿಗರು

(ಉಮಾ ರಾವ್ ಕಥೆಗಳು)

✍ ಉಮಾ ರಾವ್



ಹಾಯ್! ಪಕ್ಕದಲ್ಲಿ ಕೂತಿದ್ದ ಹೆಂಗಸು ಮೊದಲ ಬಾರಿಗೆ ಮಾತಾಡಿದ್ದಳು. ಇನ್ನೇನು ವಿಮಾನ ಹತ್ತಬೇಕೆಂದಿರುವಾಗ ಬಂದ ತಡೆ ಎಲ್ಲರಲ್ಲೂ ಕಿರಿಕಿರಿ ಉಂಟು ಮಾಡಿತ್ತು. ಅವಳತ್ತ ತಿರುಗಿದ ನನ್ನನ್ನು ನೋಡಿ ಹಲೋ ಎಂದಳು. ನನ್ನ ಹೆಸರು ಕ್ಲಾರಾ. ನನ್ನ ಹೆಸರು ಮೀನಾಕ್ಷಿ. ಹೇಳುವುದು ಕಷ್ಟವಾದರೆ ಮೀನಾ ಅನ್ನಬಹುದು.

ಒಬ್ರೇ ಪ್ರಯಾಣ ಮಾಡ್ತಿದ್ದೀರಾ.

ಹೌದು ಮಗಳನ್ನು ನೋಡಿ ಹೋಗೋಣಾಂತ ಬಂದೆ.

ಓ ಸುಮ್ಮನೇನಾ?

ಹೂಂ. ನಿಜ ಹೇಳಬೇಕು ಅಂದ್ರೆ ಅವಳನ್ನ ಒಪ್ಪಿಸೋಕೆ ಬಂದೆ.

ಈ ಕ್ಷಣ ಇಲ್ಲಿ ಪರಿಚಯವಾದ ಅವಳಿಗೆ ನನ್ನ ಸ್ವಂತ ವಿಷಯ ಏಕೆ ಹೇಳುತ್ತಿದ್ದೇನೆ ಅಂತ ನನಗೆ ಅರ್ಥವಾಯಿತು. ಆದರೆ ಹೇಳಬಾರದು ಎನ್ನಿಸಲಿಲ್ಲ.

ಅಷ್ಟು ದೂರದಿಂದ ಅವಳನ್ನು ಒಪ್ಪಿಸೋಕ್ಕೆ ಬಂದ್ರಾ? ಏನಂತ ಒಪ್ಪಿಸೋಕೆ! ಅಂತ ಕೇಳಬಹುದಾ.

ಶಿ ಇಸ್ ಇನ್ ಲವ್ ವಿಥ್ ಎನ್ ಅಮೆರಿಕನ್. ಅವಳು ಒಬ್ಬ ಅಮೆರಿಕನ್ ಹುಡುಗನನ್ನ ಪ್ರೀತಿಸಿದ್ದಾಳೆ. ಅವನನ್ನು ಮದುವೆ ಆಗಬೇಕು ಅಂತ ಇದ್ದಾಳೆ. ಆದರೆ, ಅದಕ್ಕೂ ಮುಂಚೆ ಇಬ್ಬರೂ ಒಂದು ವರ್ಷ ಒಟ್ಟಾಗಿ ಇದ್ದು ನೋಡಬೇಕಂತೆ....

ಇದುವರೆಗೂ ಯಾರ ಎದುರಿಗೂ ಬಾಯಲ್ಲಿ ಹೊರಡದ ಮಾತುಗಳು ಈಗ ಸರಾಗವಾಗಿ ಹರಿಯುತ್ತಿದ್ದವು.

ಹುಂ?

ಇದು ನಮಗೆ ಒಪ್ಪಿಕೊಳ್ಳೋಕೆ ಸಾಧ್ಯ ಇಲ್ಲ. ನಮ್ಮ ಸಂಸ್ಕೃತಿಗೆ, ನಂಬಿಕೆಗಳಿಗೆ ವಿರುದ್ಧ. ಮದುವೆಗೆ ಮುಂಚೆಯೇ .....ಅದಕ್ಕೆ ನನ್ನ ಗಂಡ ನನ್ನನ್ನು ಕಳಿಸಿದ್ರು ಅವರಿಗೆ...ಮಗಳು ನನ್ನ ಮಾತು ಕೇಳ್ತಾಳೆ ಅಂತ ನಂಬಿಕೆ.

ಕೇಳಿದ್ಲಾ?

ಇಲ್ಲ.

ನೀವು ಇಷ್ಟು ದೂರ ಬಂದು ತಪ್ಪು ಮಾಡಿದ್ರಿ,. ನೀವೀಗ ಏನು ಹೇಳಿದ್ರು ಅವಳು ಒಪ್ಪಿಕೊಳ್ಳೋ ಮನಸ್ಥಿತಿಯಲ್ಲಿ ಇರಲ್ಲ.

ನಾನು ಸರಿಯಾಗೆ ಹೇಳಿದೆ.

ಅವಳಿಗೆ ಈಗ ನೀವು ಏನು ಹೇಳಿದ್ರು ಸರಿ ಅನ್ನಿಸಲ್ಲ. ಈಗ ಹಾರ್ಟ್ ರೂಲ್ಸ್. ಇದು ನಮ್ಮಲ್ಲಿ ತುಂಬಾ ದೊಡ್ಡ ಸ್ಕ್ಯಾಂಡಲ್ ಆಗುತ್ತೆ.

ಈಗ ಅವಳಿಗೆ ಆ ಸ್ಕ್ಯಾಂಡಲ್ ಗಿಂತ ನಿಮಗೆಲ್ಲ ಏನನ್ನಿಸ್ತಾ ಇದೆ ಅನ್ನೋದಕ್ಕಿಂತ ಅವನು ಮುಖ್ಯವಾಗಿರುತ್ತಾನೆ.

ಕ್ಲಾರಾ ನಿಮಗೆ ಹೆಣ್ಣು ಮಕ್ಕಳಿದ್ದಾರಾ?

ಇಲ್ಲ ಮಕ್ಕಳೇ ಇಲ್ಲ .

ಓ ಸಾರಿ.

ಸಾರಿ ಬೇಡ. ನಾವು ಮಕ್ಕಳು ಬೇಡ ಅಂತಾನೆ ಮಾಡಿಕೊಳ್ಳಲಿಲ್ಲ ನನ್ನ ಗಂಡ ದೊಡ್ಡ ಸರ್ಜನ್. ಮಕ್ಕಳಿಗೆ ಕೊಡಬೇಕಾದಷ್ಟು ಸಮಯ ಅವನಲ್ಲಿಲ್ಲ. ಬೇಡ ಅಂದ ಒಪ್ಪಿಕೊಂಡೆ.

ಮಕ್ಕಳನ್ನು ಮಿಸ್ ಮಾಡಲ್ವಾ?

ಆಫ್ ಕೋರ್ಸ್ ಹಿಂದೊಮ್ಮೆ ಮಿಸ್ ಮಾಡ್ತಿದ್ದೆ. ನನ್ನ ಗೆಳತಿಯರೆಲ್ಲ ಮಕ್ಕಳನ್ನು ಎತ್ತಿಕೊಂಡು ಅವರ ಕಥೆಗಳನ್ನು ಹೇಳಿಕೊಂಡು ಓಡಾಡ್ತಿದ್ದಾರೆ. ಆದ್ರೆ ಈಗ ಹಾಗೇನು ಅನ್ನಿಸಲ್ಲ. ಯು ಡೋಂಟ್ ಮಿಸ್ ವಾಟ್ ಯು ಹ್ಯಾವ್ ನಾಟ್ ಎಕ್ಸ್‌ಪೀರಿಯನ್ಸ್‌ಡ್.... ತಾಯ್ತನದ ಅನುಭವ ಇಲ್ಲದವರಿಗೆ ಅಪೂರ್ಣತೆ ಕಾಡೋದು ಎಲ್ಲಾ ಶಿಟ್! ಅದೆಲ್ಲ ಸಮಾಜ ಹೆಣ್ಣು ಮಕ್ಕಳಲ್ಲಿ ತುಂಬಿರುವ ನಂಬಿಕೆಗಳು. ಇಲ್ಲಿ ಐ ಯಾಮ್ ಅ ಹೋಮ್ ಮೇಕರ್. ಈಗಿನ ಕಾಲದಲ್ಲಿ ಹೌಸ್ ವೈಫ್ ಅನ್ನಬಾರದಲ್ಲ ಅದಕ್ಕೆ ಹೇಳಿದೆ. ನಮಗೆ ಕೆಲಸ ಮಾಡುವ ಅವಶ್ಯಕತೇನೂ ಇಲ್ಲ. ಬೇಕಾದಷ್ಟು ದುಡ್ಡಿದೆ. ಮದುವೆಗೆ ಮೊದಲು ನರ್ಸ್ ಆಗಿದ್ದೆ. ನೋಡೋಕೆ ತುಂಬಾ ಚೆನ್ನಾಗಿದ್ದೆ. ಹಾಕಿಕೊಳ್ಳುವುದೇ ಮುಖ್ಯ ಗುರಿಯಾಗಿತ್ತು. ನಾನು ಅವನು ಒಂದೇ ಆಸ್ಪತ್ರೆಯಲ್ಲಿ ಕೆಲಸ ಮಾಡ್ತಿದ್ವಿ. ವಿ ಫೆಲ್ ಇನ್

ಲವ್. ಮದುವೆ ಆದ್ಮೇಲೆ ಕೆಲಸ ಬಿಡಬೇಕೂಂತಾ ಕಂಡಿಶನ್ ಮಾಡಿದ್ದ. ಅವನ ಹೆಂಡತಿ ನರ್ಸ್ ಕೆಲಸ ಮಾಡಿದರೆ ಅವನ ಘನತೆಗೆ ಕುಂದು ಬರುತ್ತಂತೆ. ಕೆಲಸ ಬಿಟ್ಟೆ. ಹೇಳ್ತಿದ್ದಾನಲ್ಲಾ..... ಆಗ ನನಗೆ ಅವನು, ಅವನ ವಿಚಾರಗಳು ಎಲ್ಲಕ್ಕಿಂತ ಮುಖ್ಯವಾಗಿದ್ದುವು. ಮತ್ತೆ ನಿಮಗೆ.... ನಿಮಗೆ

ಏರ್ಪೋರ್ಟ್ ಲೌಂಜ್ ಗಳೇ ಹಾಗೆ. ಯಾರಿಗೆ ಏನು ಬೇಕಾದರೂ ಕೇಳಬಹುದು. ನಾನು ನೀವು ಅಪರಿಚಿತರು. ಏನು ಕೇಳಿದ್ರು ತಪ್ಪಾಗಲ್ಲ. ಹೌ ಆಫನ್ ಡು ಯು ಹ್ಯಾವ್ ಸೆಕ್ಸ್ ತರಹದ ಪ್ರಶ್ನೆಗಳು ಕೂಡ! ತಪ್ಪಾದ್ರೂ ಪರವಾಗಿಲ್ಲ. ಈಗ ನಮ್ಮಿಬ್ಬರ ನಡುವೆ ಕಳೆದುಕೊಳ್ಳೋಕೆ ಏನಾದರೂ ಸಂಬಂಧ ಇದ್ದರೆ ತಾನೆ?

ಅಲ್ಲಾ ಕಾಲ ಹೇಗೆ ಕಳಿತೀರಿ? ದಿನವೆಲ್ಲ ಬೇಸರ ಆಗಲ್ವಾ?

ಆಗುತ್ತೆ ಅದಕ್ಕೆ ಹೆಚ್ಚು ಕಾಲ ತಾನ್ಯ- ಮಾನ್ಯ ಜೊತೆ ಕಳಿತೀನಿ. ಊರೂರು ಸುತ್ತುತ್ತೀನಿ.

ತಾನ್ಯಾ-ಮಾನ್ಯ ಯಾರು?

ನಮ್ಮ ಪಕ್ಷಿಗಳು. ಮಕಾವಗಳು ದಕ್ಷಿಣ ಅಮೇರಿಕ ಮೂಲದ ಗಿಣಿಗಳು. ಪೆರುವಿನಿಂದ ತಂದ್ವಿ. ನಾನು ಪೆರು ಮೂಲದವಳೆ. ನನ್ನ ಗಂಡನಿಗೂ ಇಷ್ಟ. ಅವಕ್ಕೆ ತುಂಬಾ ಬುದ್ಧಿ. ವೆರಿ ಲವಿಂಗ್. ಆದರೆ ಡಿಮ್ಯಾಂಡಿಂಗ್, ಪೊಸೆಸಿವ್ ಆಗಿವೆ. ಜೋರಾಗಿದೆ. ಬಣ್ಣ ಬಣ್ಣದ ರೆಕ್ಕೆ. ದೊಡ್ಡ ಕೊಕ್ಕು. ಕೂಗಿದ್ರೆ ನಡುಕ ಹುಟ್ಟಬೇಕು ಹಾಗೆ.

ನೋಡಿಕೊಳ್ಳೋದು ಕಷ್ಟ ಅಲ್ವಾ ಈ ರೀತಿಯ ಅಪರೂಪದ ಪ್ರಾಣಿಗಳನ್ನು ಸಾಕಿದರೆ,

ಅವಕ್ಕಾಗಿ ದೊಡ್ಡ ಪಂಜರ ಮಾಡಿಸಿದ್ದೇವೆ ನಮ್ಮ ಮನೆ ಹಿಂದಿನ ತೋಟದಲ್ಲಿ ಸುಮಾರು ಎರಡು ರೂಮಿನಷ್ಟು ವಿಶಾಲವಾದದ್ದು. ಎಷ್ಟು ಎತ್ತರವಾಗಿದೆ ಎಂದರೆ ಅವಕ್ಕೆ ತಾವು ಪಂಜರದಲ್ಲಿದ್ದೀವಿ ಅಂತ ಕೂಡ ಗೊತ್ತಾಗಬಾರದು. ಜೊತೆಗೆ ಪೂರ್ತಿ ಅವಕ್ಕೆ ಹೊಂದುವ ಪರಿಸರ ಮರ ಗಿಡ ಹಾಕಿದ್ದೀವಿ. ತಾನ್ಯಾಗೆ ಮೆಣಸಿನಕಾಯಿ ಅಂದ್ರೆ ಪ್ರಾಣ. ಮಾನ್ಯಾಗೆ ಸೀಬೆಹಣ್ಣು. ಒಳ್ಳೆ ಸೀಬೆಹಣ್ಣು ಸೌತ್ ಅಮೇರಿಕದಿಂದ ತರಿಸಿ ಕೊಡ್ತೀನಿ. ಹವಾಮಾನ ಕೂಡ ಅದಕ್ಕೆ ಹಿತವಾಗುವ ಹಾಗೆ ಮೆಂಟೇನ್ ಮಾಡ್ತೀವಿ.

ಅವು ಖುಶಿಯಾಗಿವೆಯಾ?

ಇರಬಹುದು. ಇಲ್ಲದೇನೂ ಇರಬಹುದು. ಅವುಗಳಿಗೆ ಮುಖ್ಯವಾಗಿ ಬೇಕಾದ್ದು ಗಟ್ಟಿ ಮರಗಳು. ಅವಕ್ಕಾಗಿ ಇಲ್ಲಿ ಪೆಟ್ ಶಾಪ್ ಗಳಲ್ಲಿ ಮರದ ತುಂಡುಗಳು ಸಿಗುತ್ತವೆ. ಅದನ್ನು ತಂದು ಅವುಗಳ ಸುತ್ತಮುತ್ತ ಹಾಕಿಬಿಟ್ಟರೆ ಆಯ್ತು. ಇಲ್ಲದಿದ್ದರೆ ಮನೆಯ ಕಿಟಕಿ, ಬಾಗಿಲು, ಶೆಲ್ಫಗಳು ಯಾವುದನ್ನು ಉಳಿಸಲ್ಲ. ಕುಕ್ಕಿ ಕುಕ್ಕಿ ನಾಶ ಮಾಡಿಬಿಡುತ್ತವೆ. ನನ್ನ ಹಾಗೆ ಸುಖ ಜೀವಿಗಳು. ಅವಕ್ಕೆ ಕಿರಿಕಿರಿಯಾದಾಗ ಮರ ಕಕ್ಕುತವೆ. ನಾನು ಊರು ಸುತ್ತುತೀನಿ...!

ತುಂಬಾ ಗಲಾಟೆ ಮಾಡುತ್ತಲ್ವಾ ಈ ಪಕ್ಷಿಗಳು?

ಹೂಂ. ನಮಗೆ ಬೇಡದವರು ಬಂದರಂತೂ ಕಿರುಚಾಡಿ ಬಿಡುತ್ತದೆ. ಒಂದೊಂದು ಸಲ ಅವುಗಳ ಮೂಡ್ ಸರಿ ಇಲ್ಲದಾಗ ರಾತ್ರಿಯೆಲ್ಲ ಕರ್ಕಶವಾಗಿ ಕೂಗುತ್ತವೆ. ಅಕ್ಕಪಕ್ಕದ ಮನೆಯವರಿಗೆ ತೊಂದರೆ. ಆದರೆ ಸದ್ಯ ಇದುವರೆಗೆ ಯಾರು ಕಂಪ್ಲೇಂಟ್ ಮಾಡಿಲ್ಲ. ನಮಗೆ ಮಕ್ಕಳಿಲ್ಲ ಅನ್ನೋ ಸಹಾನುಭೂತಿಯಿಂದ ಇರಬಹುದು.

ಈಗ ನಿಮ್ಮ ಗಂಡ ನೋಡಿಕೊಳ್ಳುತ್ತಾರಾ?

ಹೂಂ ಸ್ವಲ್ಪ ದಿನ ತಾನೇ ಪರ್ವಾಗಿಲ್ಲ. ಅವನಿಗೆ ನನ್ನ ತರ ಊರು ಸುತ್ತುವ ಹುಚ್ಚಿಲ್ಲ. ಹೋದ್ರು ಒಂದು ಸರಿಯಾಗಿ ಏರ್ಪಾಟ್ ಆದ ಕ್ರೂಜ್ ಅಥವಾ ಪ್ಯಾಕೇಜ್ ಟೂರ್ ಹೋಗ್ಬೇಕು. ಹಿ ವಾಂಟ್ಸ್ ಟು ಬಿ ಶೂರ್ ಆಫ್ ಎವೆರಿ ಥಿಂಗ್. ನನಗೆ ಕಂಡಕ್ಟೆಡ್ ಟೂರ್ಸ್ ಅಂದ್ರೆ ಆಗೋಲ್ಲ. ಅವು ಎಲ್ಲಿ ನಿಂತ್ಕೋ ಅಂದ್ರೆ ನಿಂತ್ಕೋ ಬೇಕು. ಕುತ್ಕೊ ಅಂದ್ರೆ ಕುತ್ಕೋಬೇಕು. ನಮಗೆ ಆರ್ಟ್ ಮ್ಯೂಸಿಯಂ ಗೆ ಹೋಗೋ ಮನಸ್ಸಿದ್ರೆ ಅವರ ಕಾರ್ಯಕ್ರಮದಲ್ಲಿ ಡಿಸ್ನಿಲ್ಯಾಂಡ್ ಇರುತ್ತೆ. ಎಲ್ಲಾದರೂ ಒಂದು ದಿನ ಹೆಚ್ಚಿಗೆ ಉಳಿದುಕೊಳ್ಳುವುದಂತೂ ಸಾಧ್ಯವೇ ಇಲ್ಲ.

ಅದಕ್ಕೆ ಒಬ್ರೇ ಹೋಗ್ತಿದ್ದೀರಾ...

ಹೌದು ನಾನು ಹೆಚ್ಚಾಗಿ ಒಬ್ಬಳೇ ಟ್ರಾವೆಲ್ ಮಾಡೋದು ಈ ಸಲ ಅಂತೂ ದೊಡ್ಡ ಜಗಳ ಮಾಡಿದ. ಯು ಆರ್ ವೈಟ್, ಬ್ಯೂಟಿಫುಲ್ ಅಂಡ್ ರಿಚ್ ಎಂದು. ಕಾಣದ ಹಿಮಾಲಯದಲ್ಲಿ ಒಬ್ಬಳೇ ಸುತ್ತಾಡೋಕೆ ಹೋಗ್ತಿಯ ಅಂತ ಕೂಗಾಡಿದ. ಅವನಿಗೆ ನಮ್ಮ ಪಶ್ಚಿಮ ಪ್ರದೇಶಗಳ ಶಿಸ್ತು ಇಷ್ಟ.ನಂಗೆ ನಿಮ್ಮ ದೇಶದ ಗಲಾಟೆ ಕನ್ಫ್ಯೂಷನ್ ಇಷ್ಟ. ಇಲ್ಲಿ ನಾನು ಬದುಕಿಗೆ ಹತ್ತಿರವಾಗುತ್ತಿದೆ ಅನ್ನಿಸುತ್ತೆ.

ಹೀಗೆ ಎಷ್ಟು ವರ್ಷದಿಂದ?

30 ವರ್ಷ....ನನ್ನ ಗಂಡ ನನ್ನನ್ನು ತುಂಬಾ ಪ್ರೀತಿಸುತ್ತಾನೆ. ಆದರೆ ಅವನಿಗೆ ನಾನು ಅನಿವಾರ್ಯ ಅಲ್ಲ.
ನಿಮಗೆ ಬೇಕಾದ ಹಾಗೆ ಬದುಕೋಕೆ ಸ್ವಾತಂತ್ರ್ಯ ಕೊಟ್ಟಿದ್ದಾರೆ ನಿಮ್ಮ ಗಂಡ. ನಂಗೆ ಒಂದೇ ದೊಡ್ಡ ಕೊರಗು ಎಷ್ಟೋ ಸಲ ರಾತ್ರಿ ಎಲ್ಲ ನಿದ್ದೆ ಬರಲ್ಲ.

ಏನಂಥಾದ್ದು?

ನೋಡಿ ನಮ್ಮ ತಾನ್ಯಾ, ಮಾನ್ಯ ಥರಾ ಪಕ್ಷಿಗಳು ತುಂಬಾ ವರ್ಷ ಬದುಕುತ್ತವೆ. ಒಂದೊಂದ್ಸಲ ಮನುಷ್ಯನಿಗಿಂತ ಹೆಚ್ಚು. ನಾನು ಹೋದ ಮೇಲೂ ತಾನ್ಯ, ಮಾನ್ಯ ಉಳಿದು ಬಿಟ್ರೆ ಅಂತ ಭಯ.

ನಿಮ್ಮ ಗಂಡ ನೋಡಿಕೊಳ್ಳುತ್ತಾರೆ.
ಅವನಿಗೆ ಎಂದೂ ಬೇರೆಯವರನ್ನು ನೋಡಿಕೊಂಡು ಗೊತ್ತಿಲ್ಲ ಬರಿ ಮುದ್ದು ಮಾಡಿ ಗೊತ್ತು.

ಮತ್ತೆ?

ಅವರನ್ನ ಶೆಲ್ಟರ್ ಗೆ ಕಳಿಸಿಬಿಡಬಹುದು. ದೂರದ ಕಾಡಿಗೆ ಡ್ರೈವ್ ಮಾಡಿಕೊಂಡು ಹೋಗಿ ಬಿಟ್ಟು ಬರಬಹುದು.
ಕೊನೆಗಾದರೂ ಅವಕ್ಕೆ ಸ್ವಾತಂತ್ರ್ಯ ಸಿಕ್ಕ ಹಾಗಾಯಿತಲ್ಲ.
ಇಲ್ಲ. ಅವಕ್ಕೆ ಸ್ವತಂತ್ರವಾಗಿ ಬದುಕಿಯೇ ಗೊತ್ತಿಲ್ಲ. ಕಾಡು ಗೊತ್ತಿಲ್ಲ , ಜೋರು ಮಳೆ ಗೊತ್ತಿಲ್ಲ, ರಕ್ತ ಹೆಪ್ಪುಗಟ್ಟುವ ಚಳಿ ಗೊತ್ತಿಲ್ಲ. ತಾವೇ ಹಣ್ಣು ಕಿತ್ತು ಬೀಜ ಒಡೆದು ತಿಂದು ಗೊತ್ತಿಲ್ಲ. ಉಪವಾಸ ಬೀಳುತ್ತವೆ. ಬೇರೆ ಪ್ರಾಣಿಗಳ ಹಿಂಸೆಗೆ ಬಲಿಯಾಗುತ್ತವೆ.
ಬೋರ್ಡಿಂಗ್ ಎಂಬ ಅಕ್ಷರಗಳು ಮಿಂಚುತ್ತ ತಡ ಎಲ್ಲರೂ ಎಚ್ಚೆತ್ತೇವು. ಉಗುರು ಕತ್ತರಿಸಿಕೊಳ್ಳುತ್ತಿದ್ದ ಮಾಸಲು ಬಟ್ಟೆಯ ಪ್ರವಾಸಿ. ಎದುರಿನ ಗಾಜಿನ ಗೋಡೆಯಲ್ಲಿ ತನ್ನ ಪ್ರತಿಬಿಂಬ ನೋಡಿಕೊಳ್ಳುತ್ತಿದ್ದ ಯುವತಿ. ತಾಯಿ ತೊಡೆ ಮೇಲೆ ನಿದ್ರೆ ಮಾಡುತ್ತಿದ್ದ 5 ವರ್ಷದ ಪುಟಾಣಿ, ಕಾಲಗಳಲಿಸಿ ಗೊರಕೆ ಹೊಡೆಯುತ್ತಿದ್ದ ಕಂದು ಸೂಟಿನ ಧಡಿಯ, ನಾವೇಕೆ ಶಿಕಾಗೋ ಬಿಟ್ಟು ಹೋಗಬೇಕು ಎಂದು ತಂದೆಯನ್ನು ಪ್ರಶ್ನಿಸುತ್ತಿದ್ದ ಹುಡುಗ, ಹನಿಮೂನ್ ಗೆ ಹೊರಟಿದ್ದ ಪಂಜಾಬಿ ಜೋಡಿ, ನನ್ನ ಪಕ್ಕ ಕೂತಿದ್ದ ಕ್ಲಾರಾ? ಎಲ್ಲರೂ ಆ ಕ್ಷಣದಲ್ಲಿ ತಮ್ಮನ್ನಾವರಿಸಿದ್ದ ಮಾತುಗಳನ್ನು, ದಿಗಿಲನ್ನು, ಉದ್ವೇಗವನ್ನು, ಶೋಭೆಯನ್ನು, ಮಂಪರನ್ನು, ಹತಾಶೆಯನ್ನು, ದಣಿವನ್ನು ಅಲ್ಲೇ ಕೊಡವಿ ಎಂದು ನಿಂತೆವು. ತದೇಕಚಿತ್ತದಿಂದ ನಮ್ಮ ಗೇಟಿನತ್ತ ನಡೆಯತೊಡಗಿದವು. ಹಿಂದಿನ ಕ್ಷಣದಲ್ಲಿ ತಾನ್ಯಾ, ಮಾನ್ಯ ಭವಿಷ್ಯದ ಬಗ್ಗೆ ಉದ್ವೇಗದಿಂದ ಕಣ್ಣೀರು ಹಾಕುತ್ತಿದ್ದ ಕ್ಲಾರಾ ಪಕ್ಕದಲ್ಲಿ ಕಾಣಿಸಲಿಲ್ಲ. ಲೈನಿನಲ್ಲೂ ನಿಂತಿರಲಿಲ್ಲ. ಸುತ್ತಲೂ ನೋಡಿದಾಗ ಕೊಂಚ ದೂರ ನಿಂತು ತನ್ನ ಬ್ಯಾಗಿನಲ್ಲಿ ಬೋರ್ಡಿಂಗ್ ಪಾಸಿಗಾಗಿಯೂ, ಅಥವಾ ಲಿಪ್ಸ್ಟಿಕ್ ಗಾಗಿಯೂ ಅಥವಾ ಮೌತ್ ಫ್ರೆಶ್ನರಿಗಾಗಿಯೂ ಅಥವಾ ಕನ್ನಡಿಗಾಗಿಯೂ ತಡಕಾಡುತ್ತಿದ್ದಳು.
ಆ ಕ್ಷಣದಲ್ಲಿ ತಾನ್ಯಾ, ಮಾನ್ಯ ಅವಳಿಂದ ದೂರ ಹಾರಿ ಹೋಗಿದ್ದುವು.

# Matrimonial

Alliance invited for a Smartha Brahmin Kannada-speaking girl based out of Mumbai who is working as a digital marketing professional. Age: 30 yrs. Height: 5 ft. Gotra: Vashishta. Nakshatra: Krithika. Boy should be settled in Mumbai or Pune with a post-graduate qualification since the girl is also a post-graduate.
Contact no. 98208 02129.

********************

Alliance Invited for a Smarta, Kannada Brahmin boy, DOB: 27th May 1992, Gotra: Kashyapa, Rashi: Meena, Nakshatra: Uttarabhadra, Qualification: B.E. Production VJTI- Mumbai working at Easyserve Marketing, Operation Head in Mumbai.
Contact: Mrs. Sriprabha Sathyanarayana
Contact No.: 9870494853




# PUZZLES & TEASERS

1. **There are 15 chocolates in a basket. Supposedly you have 15 friends, who each desire a chocolate. You give each of your friend one chocolate. After a few minutes each of your friends has one chocolate each, yet there is an chocolate remaining in the basket. How?**
2. **Sonu works on the 9th floor of an under constructed building. He always takes the elevator down to ground level at the end of the day. Yet every morning he only takes the elevator to the 7th floor and walks up the stairs to the 9th floor, even when is in a hurry. Can you think of some valid reason?**
3. **A hunter has a lion, goat and carrot and he wants to cross the river taking three of these along. However, there is a boat that can fit him plus either the lion, the goat, or the carrot. He is confused because if the lion and the goat are alone on one shore, the lion will eat the goat. If the goat and the carrot are alone on the shore, the goat will eat the carrot. Remove hunters confusion by suggesting him a way to bring all the three things to the other shore.**

### A: Number of Players - Sports/Games

| | | |
|---|---|---|
| **Badminton** | → | **1 or 2 players** |
| **Baseball** | → | |
| **Basketball** | → | |
| **Bridge** | → | |
| **Carrom** | → | |
| **Cricket** | → | |
| **Chess** | → | |
| **Football** | → | |
| **Rugby Football** | → | |
| **Kabaddi** | → | |
| **Hockey** | → | |
| **Polo** | → | |
| **Tennis** | → | |
| **Volleyball** | → | |
| **Water polo** | → | |




**Quizzes:**

a) **What is the name of the currency used in Japan?**
b) **What is the smallest country in the world?**
c) **In what year did the Titanic sink?**
d) **What is measured in watts?**
e) **What were the Egyptian kings called?**
f) **Blue and yellow mixed together make what color?**
g) **Who was the creator of the comic strip about Charlie Brown?**
h) **Which has more legs, a millipede or a centipede?**
i) **How many pints are there in a gallon?**
j) **Which reindeer leads Santa's sleigh?**

## PUZZLES & TEASERS ANSWERS

**1.Short, 2.Nine—two parents, six sons, and one daughter, 3.The letter S.**

**A)How many squares are in this picture: 40**

**B)Rebus Puzzles: BEST MAN,HAND IN HAND,QUEEN BEE,AROUND THE WORLD,BIG SPENDER,BLACK BIRD,HOLE IN ONE, 4 WHEEL DRIVE,SPACE SHIP,HALF A DOZEN,BIG DEAL,STAND BY ME.**

**1.A Mirror, 2.A Blackboard, 3.A Deck of cards , 4.A rubber band.**

***Compiled by: Mr Ananth Banwasi***

# K K Muhammed - Unsung hero of Indian Archaeology

Some people do yeomen's job but are never known publicly for their contributions in their fields. Mr. K K Muhammed (KKM) is one such person. He is a historian cum archaeologist from ASI *(Archaeological Survey of India)*.

This is an attempt to highlight his contributions towards reinstating the ruins from ancient to medieval India.

His name first came into prominence when Allahabad High Court asked ASI to provide evidence, if any, that there existed a Temple on the disputed site of Ayodhya (Ram Janmabhoomi/Babri Masjid). KKM was given the job.

In his Malayalam autobiography, 'I am India', he writes how 'Marxist historians' colluded with Extremist Muslim groups to subvert attempts to arrive at an amicable agreement on the Ayodhya dispute. This was more controversial because KKM was the archaeologist who provided evidence that there existed a Temple at the site which was destroyed and Babri Masjid was built on it.

This helped the Supreme Court deliver its judgement. KKM suddenly became well known in various circles.

KKM has many archaeological excavations to his credit, but nothing comes closer to what he did in Morena, Madhya Pradesh. What KKM did, needed lot of raw courage, determination, historical knowledge and negotiating skills because he had to deal with the likes of the most dreaded dacoits of Chambal like - Nirbhay Gujjar, the mining mafia and politicians who had vested interests.



Now, to the ruins are Mr. KKM's greatest achievement. Until recently, these ruins were scattered all over the region and lost in memory of the Indian historians and archaeologists. These have a significant influence on India.

The ruins are in Morena District of Madhya Pradesh. Here are the images of how Mr. KKM found these ruins: Bateshwar Hindu temples.

Then in 2005, everything changed and Bateshwar was reborn. Under the leadership of archaeologist K.K.Muhammed, the then ASI Bhopal;s regional superintendent, an ambitious project was started to collect all the ruied masonry and attempt to restore as many of the temples as possible. I can't even start to imagine how complex this task must have been, but the results are mind boggling, and simply spectacular.

The images tell us how KKM found the ruins. He wanted to reconstruct the entire group of around 200 Temples. This was difficult at various levels.

Firstly, the area is so vast, and the demolition of these group of Temples was so scattered, it was extremely difficult to piece together the jigsaw puzzle. He brought in numerous experts and piece by piece every puzzle was put together painstakingly.

Secondly, the ruins lied in the most dreaded region of India - Chambal. This region



was known for, and infested with ferocious dacoits. Without their cooperation it would be impossible to reinstate the Temples back to their original glory. To overcome this problem, he contacted the dacoits and convinced them that he was doing his job, and reinstating the Temples. The dacoits not just agreed not to disrupt his work, but also provided protection to KKM and his men while they went about reinstating this group of Temples.

As things were going well for KKM, a major problem cropped up. The MP police went after the dacoits and started eliminating them. So, the protection by them came to an end and the other set of enemies came to the fore - mining mafia and politicians. KKM was threatened while some of his men including cops were killed. Then the Union Govt came to his assistance and that made KKM's work a bit easier.

What KKM has achieved while he was there is breathtaking - off the 200 or so Temple units he was able to reinstate around 120 Temples (*the ASI is continuing the good job to put the entire group of Temples back to their original state*).

This is KKM's finest achievement. This is what he made of the ruins -

For all this Mr. K K Muhammed deserves all the credit because this is the biggest group of Temples in the world.



These group of Temples are dedicated to Shiva and MahaVishnu. Just in this region is also a group of 64 Temples dedicated to Parvati (Shiva's console). It is called the Chausath Yogini Temple, Morena *(64 Temples of Yogini - Parvati).*

This is as important as any because this Temple is the original design which was copied by Lutyens to design the earlier Parliament of India, built in 1938.

It is amazing how great souls do remarkable jobs and just fade away without being recognized by its citizens for their commendable job.

Pl do not remember Only Aurangzeb or Romilla Thapar. Remember K K Mohammed who is the cause for resurrecting our Glorius History.

*Note:* The Government of India honored KKM with a PADMA SHRI.

# ಅಸೋಸಿಯೇಷನ್‌ನಲ್ಲಿ ಚಿತ್ರಕಲಾ ಸ್ಪರ್ಧೆ

ಇದೇ ಡಿಸೆಂಬರ್ 23 ರ ಬೆಳಗ್ಗೆ ಮುಂಜಾನೆ 6:45ಗೆ, ಬೆಳಕು ಹರಿಯುವ ಮುನ್ನವೇ ಅಸೋಸಿಯೇಷನ್ ಎದುರುಗಡೆ ಒಂದು ಸಣ್ಣ ಜನಸಂದಣಿ ತಯಾರಾಗಿತ್ತು. ಯಾಕೆಂದರೆ ಅವತ್ತು ನಮ್ಮ ಚಿತ್ರ ಬರೆಯುವ ಸ್ಪರ್ಧೆ ಬೆಳಿಗ್ಗೆ 7ರಿಂದ ಪ್ರಾರಂಭವಾಗಲಿತ್ತು. ಮುಂಬಯಿ ಹಾಗೂ ಮುಂಬಯಿಯ ಹೊರಗಿನಿಂದಲೂ ಬಂದ ಈ ತರುಣರು Landscape painting ವಿಭಾಗದಲ್ಲಿ ಭಾಗವಹಿಸಲು ಬಂದವರಾಗಿದ್ದರು. ಅವರಿಗೆಲ್ಲಾ, ಕಾಫಿ, ತಿಂಡಿಯ ಆತಿಥ್ಯ ನೀಡಿ, ನೋಂದಣಿ ಮಾಡಿಕೊಂಡು ಬಂದವರನ್ನು ಕಳಿಸುವ ಹೊತ್ತಿಗೆ, ಪೂರ್ಣ ಬೆಳಗಾಗಿ, ಸೂರ್ಯನ ಎಳೆಯ ಕಿರಣಗಳು ಅಸೋಸಿಯೇಶನಿನಲ್ಲಿ ರಂಗೇರಿಸುತ್ತಿದ್ದಂತೆ ಸಣ್ಣ ಮಕ್ಕಳು ತಮ್ಮ ಪಾಲಕರ ಬೆರಳು ಹಿಡಿದುಕೊಂಡು ಬರಲಾರಂಭಿಸಿದರು. ಇವರೆಲ್ಲಾ ತರಗತಿಗನುಗುಣವಾಗಿ ಬೇರೆ ಬೇರೆ ವಿಭಾಗಗಳಲ್ಲಿ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಲು ಬಂದ ಚಿಣ್ಣರಾಗಿದ್ದರು. ಎಲ್ಲಿ ನೋಡಿದರಲ್ಲಿ ಮಕ್ಕಳ ಸಂತೆ. ಸರಿ, ಎಲ್ಲರನ್ನೂ ನೋಂದಣಿ ಮಾಡಿಕೊಂಡು, ಅವರಿಗೆ ಡ್ರಾಯಿಂಗ್ ಕಾಗದ ಕೊಟ್ಟು ಅವರಿಗೆ ಜಾಗ ಕೊಟ್ಟು ಕೂರಿಸುವ ಕೆಲಸ ಶುರುವಾಯಿತು. ಕೆಳಗಿನ ನಮ್ಮ ಲೈಬ್ರರಿ ಹಾಲು ತುಂಬಿದ ಮೇಲೆ ಮಕ್ಕಳನ್ನು ಮೊದಲನೇ ಅಂತಸ್ತಿನ ಹಾಲಿನಲ್ಲಿ ಕೂರಿಸಲು ಪ್ರಾರಂಭಿಸಿದೆವು. ಇಷ್ಟರ ಮಧ್ಯೆ Landscape painting ವಿಭಾಗದ ಕಲಾವಿದರುಗಳು ತಮ್ಮ ಹೆಸರುಗಳನ್ನು ನೋಂದಣಿ ಮಾಡಿಕೊಂಡು ನಮ್ಮ ಸುತ್ತಮುತ್ತ ಸ್ಥಳದಲ್ಲಿ ಚಿತ್ರ ಬರೆಯುವುದಕ್ಕಾಗಿ ಹೊರಟು ಹೋಗಿ ಆಗಿತ್ತು.




ಮಕ್ಕಳಿಗೆ ಅವರ ವಯಸ್ಸಿನ ಆಧಾರದ ಮೇಲೆ ಬೇರೆ ಬೇರೆ ವಿಷಯಗಳನ್ನು ಚಿತ್ರ ಬರೆಯಲು ಕೊಡಲಾಗಿತ್ತು ಅದರ ಪ್ರಕಾರವೇ ಅವರೆಲ್ಲರೂ ತಯಾರಾಗಿ ಬಂದಿದ್ದು ಹುಮ್ಮಸ್ಸಿನಿಂದ ತಮ್ಮ ತಮ್ಮ ಕಲೆಗಾರಿಕೆಯನ್ನು ಕಾಗದದ ಮೇಲೆ ಕ್ರೇಯಾನ್, ಪೋಸ್ಟರ್ ಕಲರ್, ವಾಟರ್ ಕಲರ್ ಇತ್ಯಾದಿ ಬಣ್ಣ ಬಣ್ಣಗಳಿಂದ ತುಂಬಿಸಲು ತೊಡಗಿದರು. ಜೊತೆಯಲ್ಲಿ ಬಂದಿದ್ದ ಪಾಲಕರುಗಳು ನಮ್ಮ ಗಣಪತಿಯ ಎದುರುಗಡೆ ಆರಾಮವಾಗಿ ಕೂತು ಕಾಯುತ್ತಿದ್ದರು. ಮಕ್ಕಳೆಲ್ಲ ತಮ್ಮ ತಮ್ಮ ಕಲಾಕೃತಿಗಳನ್ನು ಮುಗಿಸಿ ನಮಗೆ ಒಪ್ಪಿಸುವ ಹೊತ್ತಿಗೆ ಅವರ ಹಸಿದ ಹೊಟ್ಟೆಗೆ ಸರಿಯಾಗಿ ಬಿಸಿ ಬಿಸಿ ವಡಾ ಪಾವ್, ಚಿಪ್ಸ್ ಮತ್ತು ಫ್ರೂಟಿ ತಯಾರಾಗಿತ್ತು. ಮಕ್ಕಳು ಹಾಗೂ ಅವರ ಪಾಲಕರು ಇದನ್ನು ಖುಷಿಯಿಂದ ಸವಿದರು. ಈ ಸ್ಪರ್ಧೆ ಮುಗಿಯುವಾಗ ಮಧ್ಯಾಹ್ನ ಹನ್ನೆರಡು ದಾಟಿತ್ತು. ನಮ್ಮ ತೀರ್ಪುಗಾರರಾದ ಕಲಾವಿದ ಹಿರಿಯರಾದ ಶ್ರೀ ಕುಲಕರ್ಣಿಯವರು ಈ ಹೊತ್ತಿಗೆ ದಯಮಾಡಿಸಿದರು. ಅವರಿಗೆ ಕಾಫಿ, ತಿಂಡಿ ತೆಗೆದುಕೊಂಡು ಸುಧಾರಿಸಿಕೊಂಡ ಅವರು ತಕ್ಷಣ ತಮ್ಮ ಕೆಲಸ ಆರಂಭಿಸಿ ಸುಮಾರು ಅರ್ಧ ಗಂಟೆ ಒಳಗೆ ಮೌಲ್ಯಮಾಪನ ಮುಗಿಸಿ ಬಹುಮಾನಿತರನ್ನು ನಿರ್ಧರಿಸಿದರು. ನಂತರ ಅವರನ್ನು ನಮ್ಮ ಛಾವಣಿಯ ಮೇಲೆ ಕರೆದುಕೊಂಡು ಹೋಗಿ ನಮ್ಮ ಸಂಜೀವ ಭಟ್ಟ ಇಳಿಸಿದ ನಳಪಾಕ

**THE MYSORE ASSOCIATION, BOMBAY**

**DRAWING / PAINTING COMPETITION WINNERS - 2023**

| | | |
|---|---|---|
| | **GROUP A** | **PRIZE** |
| 1 | Bhavya Gunwant Jain | I |
| 2 | Yashika Vaity | II |
| 3 | Veda Satyawan Satelkar | III |
| 4 | Vency Nilesh Mehta | Special Recommandation |
| | **GROUP B** | **PRIZE** |
| 1 | Sai Chandan Bhagat | I |
| 2 | Taareni Bhowmik | II |
| 3 | Prisha Negi | III |
| 4 | Yaasika Selvi Vigneshwaran | Special Recommandation |
| | **GROUP C** | **PRIZE** |
| 1 | Girija Vidyadhar Parulekar | I |
| 2 | Hasti hiten Doshi | II |
| 3 | Sanya Sachin Kamble | III |
| 4 | Pranava Pritesh Randeria | Special Recommandation |
| | **GROUP D** | **PRIZE** |
| 1 | Ambiya Shaikh I | |
| 2 | Dnyaneshwari Pandurang Magdum | II |
| 3 | Ananya Vasal III | |
| 4 | Riya Shivla Prajapati | Special Recommandation |
| | **GROUP E** | **PRIZE** |
| 1 | Prajwal Pravin Gawade | I |
| 2 | Shravani Satyawan Satelkar | II |
| 3 | Umaymah Maqbool Ahmed Thakur | III |
| 4 | Kratika MouryaSpecial Recommandation | |

**THE MYSORE ASSOCIATION, BOMBAY**

**LANDSCAPE PAINTING COMPETITION WINNERS - 2023**

| | | PRIZE |
|---|---|---|
| 1 | Vaibhav Jagtap | I |
| 2 | Vishal Sutar | II |
| 3 | Vinayak Kheratkar | III |
| 4 | Suraj Karande | Consolation |
| 5 | Kevin Dias | Consolation |
| 6 | Poorvashri Hiremath | Woman Artist Prize |
| 7 | Sachin Bamne | Judge's Special Recommandation |
| 8 | Omkar Ubare | Judge's Special Recommandation |

ಸೇವನೆ ಮಾಡಿಸಿದೆವು. ಇದಾದ ನಂತರ ನಮ್ಮ ಮೊದಲನೇ ಅಂತಸ್ತಿನ ಹಾಲ್‌ನಲ್ಲಿ ಬಹುಮಾನ ವಿತರಣಾ ಕಾರ್ಯಕ್ರಮ ನೆರವೇರಿತು. ನಮ್ಮ ಹಾಲ್ ಮಕ್ಕಳಿಂದ ಮತ್ತು ಅವರ ಪಾಲಕರಿಂದ ಕಿಕ್ಕಿರಿದಿತ್ತು. ಈ ಕಾರ್ಯಕ್ರಮದ ನಂತರ ಮಕ್ಕಳು ಹಾಗೂ ಪಾಲಕರು ಅವರವರ ಮನೆಗೆ ತೆರಳಿದರು.

ಇಷ್ಟರಲ್ಲಿಯೇ ನಮ್ಮ ಹಿರಿಯ ಕಲಾವಿದರು ತಮ್ಮ Landscape paintingಗಳನ್ನು ಮುಗಿಸಿ ಒಬ್ಬೊಬ್ಬರಾಗಿ ವಾಪಸು ಬರತೊಡಗಿದ್ದರು. ಅವರಿಂದ ಅವರ ಕಲಾಕೃತಿಗಳನ್ನು ಇಸಿದುಕೊಂಡು ಭದ್ರವಾಗಿಟ್ಟು ಅವರ ಊಟದ ಏರ್ಪಾಟು ಮಾಡಲಾಯಿತು. ನಂತರ ಇದಕ್ಕಾಗಿಯೇ ಆಗಮಿಸಿದ್ದ, ಖ್ಯಾತ ಕಲಾವಿದ




ಹಾಗೂ ನೆಹರು ಸೆಂಟರ್‌ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಶ್ರೀ ರಾಕೇಶ್ ಸೂರ್ಯವಂಶಿ ಅವರಿಂದ Landscape painting ನ ಮೌಲ್ಯಮಾಪನ ನಡೆದು ಬಹುಮಾನಿತರ ನಿರ್ಧಾರವಾಯಿತು. ನಂತರ ಮತ್ತೆ ಎಲ್ಲರೂ ಮೊದಲನೇ ಅಂತಸ್ತಿಗೆ ತೆರಳಿ ಚಿಕ್ಕ, ಚೊಕ್ಕ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಮುಗಿಸಿದೆವು.

ಈ ರೀತಿಯ ಸ್ಪರ್ಧೆ 2019ರಲ್ಲಿ ಮಾಡಿದ ನಂತರ ಕೋವಿಡ್ ಕಾರಣದಿಂದ ಮುಂದುವರಿಸಲಾಗಿರಲಿಲ್ಲ. ಈ ಬಾರಿಯ ವಿಶೇಷವೆಂದರೆ ನಮ್ಮ ಸ್ಪರ್ಧೆಯಲ್ಲಿ ನೋಂದಣಿ ಮಾಡುವುದಕ್ಕೆ ಗೂಗಲ್ ಫಾರ್ಮ್ ಉಪಯೋಗಿಸಿದ್ದು. ಸುಮಾರು ಎರಡು ವಾರ ಮೊದಲೇ ಇದನ್ನು ಜಾರಿ ಮಾಡಿದ್ದ ಈ ಹೊಸ ತಂತ್ರ ಜ್ಞಾನದ ಉಪಯೋಗದಿಂದ ನಮಗೆ ಅತ್ಯುತ್ತಮ ಪ್ರತಿಕ್ರಿಯೆ ದೊರಕಿ ಸುಮಾರು 225ಕ್ಕೂ ಹೆಚ್ಚು ಜನ ನೋಂದಣಿ ಮಾಡಿ ಅದರಲ್ಲಿ ಸುಮಾರು ನೂರೈವತ್ತು ಜನ ನಮ್ಮ ಸ್ಪರ್ಧೆಯಲ್ಲಿ ಭಾಗವಹಿಸಿದರು.

ಈ ಕಾರ್ಯಕ್ರಮದಲ್ಲಿ ಯೋಜನೆಯಲ್ಲಿ ವಿವರಗಳನ್ನು ರೂಪಿಸುವಲ್ಲಿ ಹಾಗೂ ಕಾರ್ಯಕ್ರಮದ ದಿನ ನಮ್ಮ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಗೆಳೆಯ ಕಲಾವಿದ ಶ್ರೀ ಜಯ ಸಾಲಿಯಾನ್ ಇವರ ಸಹಕಾರ ಮತ್ತು ಮಾರ್ಗದರ್ಶನವನ್ನು ಮರೆಯಲು ಸಾಧ್ಯವೇ ಇಲ್ಲ. ನಮ್ಮ ಮೈಸೂರು ಅಸೋಸಿಯೇಷನ್ ಇವರ ಈ ಉಪಕಾರಕ್ಕೆ ಋಣಿಯಾಗಿದೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂದ ಸ್ಪರ್ಧಿಗಳನ್ನು ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದಕ್ಕೆ ಗಣಪತಿ ಶಂಕರಲಿಂಗ್, ಶಶಿಕಾಂತ ಜೋಶಿ, ಭವಾನಿ, ಶ್ಯಾಮಲಾ, ರಾಧೇಶ್, ರೇಷ್ಮಾ, ವೀಣಾ ಇವರೆಲ್ಲಾ ಬಂದು ಸಹಕರಿಸಿದರು. ನಮ್ಮ ಸಿಬ್ಬಂಧಿ ವರ್ಗದ ಮಧು, ಶೀಲಾ ಇವರು ಈ ಕಾರ್ಯಕ್ರಮದ ತಯಾರಿಯಲ್ಲಿ ಬಹಳ ದಿನಗಳಿಂದ ಪರಿಶ್ರಮಪಟ್ಟರು. ಕಾರ್ಯಕ್ರಮದ ದಿನವೂ ಮಧು, ಶೀಲಾ, ಶ್ರೀಧರ ಹಾಗೂ ಇತರ ಸಿಬ್ಬಂದಿ ವರ್ಗದವರು ಉತ್ಸಾಹದಿಂದ ಸಹಕರಿಸಿದರು. ಸಂಜೀವ ಮತ್ತು ತಂಡ ಹೊತ್ತು ಹೊತ್ತಿಗೆ ರುಚಿ ಕಟ್ಟಾದ ಕಾಫಿ, ತಿಂಡಿ, ಊಟದ ಏರ್ಪಾಡು ಮಾಡಿ ಎಲ್ಲರ ಮನ ತಣಿಸಿದರು. ಒಟ್ಟಿನಲ್ಲಿ ಇವರೆಲ್ಲರ ಸಹಕಾರದಿಂದ ಯಾವುದೇ ಅಡಚಣೆಗಳಿಲ್ಲದೆ ಒಂದು ಒಳ್ಳೆಯ ಕಾರ್ಯಕ್ರಮ ಸುಗಮವಾಗಿ ನಡೆದು ಹೋಯಿತು. ಬಂದವರೆಲ್ಲ ಈ ಕಲಾಕೃತಿಗಳನ್ನು ನೋಡಿ ಆನಂದಿಸಿದರು.




Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077